

ಒಲೀಮಾ ಸಾಧನ ಕೇಂದ್ರದ ವಿಹಂಗಮ ನೋಟ

ಇಂತಹ ಸುಂದರವಾದ ಹಸುರು ಶಾಂತಿಧಾಮ ಸ್ಯಾನ್ ಫ್ರಾನ್ಸಿಕೋ ಸಂಘದ ಕೈತಪ್ಪಿಹೋಗುವ ಸಂದರ್ಭ ಒದಗಿತ್ತು. ಕ್ಯಾಲಿಫೋರ್ನಿಯಾ ಸರ್ಕಾರ ಅದನ್ನು ರಾಜ್ಯದ ಉದ್ಯಾನವನ ಎಂದು ಘೋಷಿಸುವ ಸಂದರ್ಭ ಒದಗಿತ್ತು. ಸ್ವಾಮಿ ಅಶೋಕಾನಂದರ, ಅವರ ಸಹಾಯಕರಾಗಿದ್ದ ಅಮೆರಿಕನ್ ಸ್ವಾಮಿ ಚಿದ್ರೂಪಾನಂದರ ಮಹಾ ಸಾಹಸದಿಂದ ಅಮೆರಿಕದ ಕೇಂದ್ರ ಸರ್ಕಾರ ಒಂದು ಶಾಸನ ಮಾಡಿ ಅದು ವೇದಾಂತ ಸಂಘದ ವಶದಲ್ಲೇ ಇರತಕ್ಕದ್ದು ಎಂದು ತೀರ್ಮಾನಿಸಿತು. ಅದರದ್ದೇ ಒಂದು ಸಾಹಸ ಕಥೆ.

ಪ್ರತಿ ವರ್ಷ ಮೇ ತಿಂಗಳಲ್ಲಿ ಅಲ್ಲಿ ಐದು ದಿನಗಳ ಆಧ್ಯಾತ್ಮಿಕ ಶಿಬಿರ ನಡೆಯುತ್ತದೆ. ಅದರ ಭಾಗವಾಗಿ ಯುವಕರಿಗೆ ಆಧ್ಯಾತ್ಮಿಕ ಮೌಲ್ಯಗಳನ್ನು ಪರಿಚಯ ಮಾಡಿಸಿಕೊಡುವ ಒಂದು ಕಾರ್ಯಕ್ರಮವಿರುತ್ತದೆ. ಈಚೆಗೆ ಪ್ರತಿವರ್ಷವೂ ಯುವಕರಿಗೆ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣವನ್ನು ನೀಡುವ ಶಿಬಿರವೂ ನಡೆಯುತ್ತಿದೆ. ಈ ವರ್ಷ ಸ್ಯಾನ್ ಫ್ರಾನ್ಸಿಸ್ಕೋ ವೇದಾಂತ ಸಂಘದ ಶತಮಾನೋತ್ಸವ ಆಚರಣೆಯ ಅಂಗವಾಗಿ ಮೇ ೨೭ರಿಂದ ೩೧ರವರೆಗೆ ಐದು ದಿನಗಳ ಶಿಬಿರ ನಡೆಯಿತು. 'ನಮಗೆ ಸಾಮಾನ್ಯವಾದ ಆಧ್ಯಾತ್ಮಿಕ ನೆಲೆ' ಎಂಬ ವಿಷಯವನ್ನು ಕುರಿತಂತೆ ಯಹೂದಿ, ಸೂಫಿ, ಕ್ರೈಸ್ತ, ಬೌದ್ಧ ಧರ್ಮ ಗುರುಗಳು ಮಾತನಾಡಿದರು. ಹಾಗೂ ವೇದಾಂತವನ್ನು ಕುರಿತಂತೆ ಪ್ರವಚನಗಳೂ ಚರ್ಚೆಗಳೂ ನಡೆದುವು. ಕೊನೆಯ ದಿನ ೧೨೦೦ಕ್ಕೂ ಹೆಚ್ಚು ಭಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಹೀಗೆ ಸ್ಯಾನ್ ಫ್ರಾನ್ಸಿಸ್ಕೋ ವೇದಾಂತ ಸಂಘವು ಸ್ವಾಮಿ ಪ್ರಬುದ್ಧಾನಂದ, ಬ್ರಹ್ಮಚಾರಿ ತ್ಯಾಗೀಶ ಚೈತನ್ಯ (ಪೂರ್ವಾಶ್ರಮದಲ್ಲಿ ಗ್ರೆಗ್), ಸ್ವಾಮಿ ಅಸಿತಾನಂದ, ಸ್ವಾಮಿ ವೇದಾನಂದ, ಬ್ರಹ್ಮಚಾರಿ ವಿಮುಕ್ತ ಚೈತನ್ಯ ಈ ಇಷ್ಟು ಜನರಿಂದ ಕೂಡಿದ್ದು, ಸದ್ದುಗದ್ದಲಗಳಿಲ್ಲದೆ ಅಮೆರಿಕದ ಆ ಸುಂದರ ಭಾಗದಲ್ಲಿ ವೇದಾಂತ ಪ್ರಚಾರ ಕಾರ್ಯದಲ್ಲಿ ತೊಡಗಿದೆ. ✦

# ನನ್ನ ಗುರುದೇವ ಸ್ವಾಮಿ ರಾಮಕೃಷ್ಣಾನಂದ

ಸ್ವಾಮಿ ಚಿದ್ಘನಾನಂದೇಂದ್ರ ಸರಸ್ವತಿ

ಸ್ವಾಮಿ ಚಿದ್ಘನಾನಂದೇಂದ್ರ ಸರಸ್ವತಿಯವರು ಸ್ವಾಮಿ ರಾಮಕೃಷ್ಣಾನಂದಜಿಯವರೊಡನೆ ೧೨ ವರ್ಷ ಇದ್ದು ಸೇವೆಗೈಯುವ ಅವಕಾಶವನ್ನು ಪಡೆದವರು. ತೆಲುಗು ಭಾಷೆಯಲ್ಲಿ ಪ್ರಕಟವಾಗಿದ್ದ ಅವರ ನೆನಪುಗಳ ಕೆಲವು ತುಣುಕುಗಳು ಇವು. ಜುಲೈ ತಿಂಗಳ ೨೯ರಂದು ಸ್ವಾಮಿ ರಾಮಕೃಷ್ಣಾನಂದರ ಜಯಂತಿ ಉತ್ಸವ.

ಸ್ವಾಮಿ ರಾಮಕೃಷ್ಣಾನಂದರದು ಎತ್ತರದ ನಿಲುಗಟ್ಟು, ಕಟ್ಟುಮಸ್ತಿನ ದೇಹ, ಹೊಂಬಣ್ಣದ ಮೈಬಣ್ಣ ಮತ್ತು ವಿಶಾಲವಾದ, ಪ್ರಶಾಂತತೆಯನ್ನು ಹೊರಸೂಸುತ್ತಿರುವ ವದನ. ಆಧ್ಯಾತ್ಮಿಕ ಜ್ಯೋತಿಯಿಂದ ಪ್ರಜ್ವಲಿಸುತ್ತಿದ್ದವು ಅವರ ಕಣ್ಣುಗಳು.

ಚೆನ್ನೈನಲ್ಲಿ ಸ್ವಾಮಿ ರಾಮಕೃಷ್ಣಾನಂದರು ತಮ್ಮ ಕಾರ್ಯವನ್ನು ಆರಂಭಿಸಿದ್ದು ೧೮೯೭ರಲ್ಲಿ. ಸುಮಾರು ಹನ್ನೆರಡು ವರ್ಷಗಳ ಕಾಲ, ಅಂದರೆ ೧೮೯೮ರಿಂದ ೧೯೧೧ರ ಕಡೆಯ ಭಾಗದವರೆಗೂ ಅವರು ಅಲ್ಲಿದ್ದರು. ಅವರು ನಡೆಸುತ್ತಿದ್ದ ತರಗತಿಗಳಿಗೆ ನಾನು ತಪ್ಪದೆ ಹೋಗುತ್ತಿದ್ದೆ. ಭಕ್ತರ ಕೋರಿಕೆಯ ಮೇರೆಗೆ, ಸ್ವಾಮಿಗಳು ದಿನವೂ ನಗರದ ವಿವಿಧ ಪ್ರದೇಶಗಳಿಗೆ ಭೇಟಿ ಕೊಡುತ್ತಿದ್ದರು. ಅಲ್ಲಿ ಬೆಳಗ್ಗೆ ಮತ್ತು ಸಂಜೆ— ಎರಡು ಹೊತ್ತೂ ಒಂದೂವರೆ ಘಂಟೆಯಿಂದ ಎರಡು ಘಂಟೆಗಳ ಕಾಲ ಮಾತನಾಡುತ್ತಿದ್ದರು.

ಸ್ವಾಮಿ ರಾಮಕೃಷ್ಣಾನಂದರು ಬಂಗಾಳಿಗಳು. ದಕ್ಷಿಣ ಪ್ರಾಂತದ ಭಾಷೆಗಳಾವುದನ್ನೂ ಅರಿತವರಲ್ಲ. ಆಂಗ್ಲ ಭಾಷೆಯಲ್ಲಿ ಮಾತ್ರ ಮಾತನಾಡುತ್ತಿದ್ದರು. ಸಮಾಜದ ವಿವಿಧ ಸ್ತರಗಳಿಂದ ಬಂದ ಹಾಗೂ ವಿವಿಧ ಜಾತಿ-ಪಂಗಡಗಳಿಗೆ ಸೇರಿದ ಜನರು ಅವರ ತರಗತಿಗಳಿಗೆ ಬಂದು ಅವುಗಳಿಂದ ಪ್ರಯೋಜನ ಪಡೆಯುತ್ತಿದ್ದರು. ಸರಳವಾದ ಸ್ಪಷ್ಟವಾದ ಭಾಷೆಯಲ್ಲಿ ಮಾತನಾಡುತ್ತಿದುದರಿಂದ, ಆಂಗ್ಲ ಭಾಷೆಯಲ್ಲಿ ಅಷ್ಟು ಪರಿಣತರಲ್ಲದವರೂ ಅವರ ಮಾತನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದಾಗಿತ್ತು. ಅವರ ತರಗತಿಗಳಲ್ಲಿ ನಿಯಮಿತವಾಗಿ ಉಪಸ್ಥಿತರಾಗುತ್ತಿದ್ದವರಲ್ಲಿ ನಾನೂ ಒಬ್ಬ. ಆ ಪ್ರವಚನಗಳು ನನ್ನ ಮನಸ್ಸಿನಲ್ಲಿ ಅಳಿಸಲಾಗದ ಮುದ್ರೆಯನ್ನೊತ್ತಿದೆ. ಹಾಗೂ, ಎಂದಿಗೂ ಬದಲು ಮಾಡಲಾಗದ ಅಥವಾ ನಾಶ ಮಾಡಲಾಗದ, ಮಾನಸಿಕ ಪರಿವರ್ತನೆಯನ್ನು ತಂದಿದೆ. ಇದನ್ನು ನಾನು ನ್ಯಾಯಯುತವಾದ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದೇನೆ.

ತಮ್ಮ ಪ್ರವಚನಗಳಲ್ಲಿ ರಾಮಕೃಷ್ಣಾನಂದರು ಹಲವಾರು ಸಾಧುಸಂತರು, ಋಷಿಮುನಿಗಳು ಬೋಧಿಸಿದ ಆದರ್ಶಗಳ ಬಗ್ಗೆ ವಿಚಾರ ಮಾಡುತ್ತಿದ್ದರು. ಅಗಾಧವಾದ ಅಂತರ್ದೃಷ್ಟಿಯನ್ನಿಟ್ಟುಕೊಂಡು ಮಾತನಾಡುತ್ತಿದ್ದರವರು. ಅವರದು ಬಹು ಉದಾರವಾದ ವಿಶಾಲವಾದ ದೃಷ್ಟಿಕೋನ. ಪ್ರೇಮಪೂರಿತವಾಗಿತ್ತು ಅವರ ನುಡಿಗಳು. ಧಾರ್ಮಿಕ ಸಹಿಷ್ಣುತೆಯನ್ನು ಪ್ರತಿಪಾದಿಸುತ್ತಿದ್ದರವರು. ಅವರ ಮಾತುಗಳನ್ನಾಲಿಸುತ್ತಿದ್ದವರು ಉನ್ನತ ಆಧ್ಯಾತ್ಮಿಕ ಸ್ತರಗಳಿಗೆ ಒಯ್ಯಲ್ಪಡುತ್ತಿದ್ದರು.

ಭಕ್ತರ ಮೇಲೆ ಅವರು ತೋರುತ್ತಿದ್ದ ಪ್ರೀತಿ ಅಸದಳ. ಅದು

ಮಾತೃ ವಾತ್ಸಲ್ಯವನ್ನೂ ಮೀರಿತ್ತು. ಬಡವರು ಮತ್ತು ಕಷ್ಟದಲ್ಲಿರುವವರ ಮೇಲೆ ಅವರು ಅನುಕಂಪೆಯನ್ನೂ ನಿಸ್ವಾರ್ಥ ಪ್ರೇಮವನ್ನೂ ಹರಿಸುತ್ತಿದ್ದರು. ಎಷ್ಟೋ ಸಂದರ್ಭಗಳಲ್ಲಿ ತಮಗೆಂದು ಇಟ್ಟುಕೊಂಡಿದ್ದ ಚಪಾತಿಗಳನ್ನು ಭಿಕ್ಷುಕರಿಗೆ, ನಿರ್ಗತಿಕರಿಗೆ ಕೊಟ್ಟುಬಿಟ್ಟದ್ದನ್ನು ನಾನೇ ಕಣ್ಣಾರೆ ಕಂಡಿದ್ದೇನೆ.

ಯಾರಾದರೂ ಅವರನ್ನು ಊಟದ ಸಮಯದಲ್ಲಿ ಭೇಟಿಯಾಗಲು ಬಂದರೆ, ಅಥವಾ ಅವರ ಶಿಷ್ಯರಲ್ಲಿ ಒಬ್ಬ ಬಂದರೂ, ಸ್ವಾಮಿಗಳು ತಮ್ಮ ಪಕ್ಕದಲ್ಲಿಯೇ ಕುಳ್ಳಿರಿಸಿ ಕೊಂಡು ತಮ್ಮೊಡನೆಯೇ ಕೂಡಿ ಉಣ್ಣುವಂತೆ ಒತ್ತಾಯಿಸುತ್ತಿದ್ದರು. ತಾವು ಪ್ರಸಾದ ಸ್ವೀಕರಿಸುವ ಮೊದಲು, ಇತರರಿಗೆ ಉಣ ಬಡಿಸುವುದು ಅವರಿಗೆ ಅಭ್ಯಾಸವೇ ಆಗಿ ಹೋಗಿತ್ತು



**ಸ್ವಾಮಿ ರಾಮಕೃಷ್ಣಾನಂದರು**

ಶ್ರೀರಾಮಕೃಷ್ಣರ ಜಯಂತ್ಯುತ್ಸವದ ಹಿಂದಿನ ದಿನ ಸಾಯಂಕಾಲ ಐದು ಘಂಟೆಗೆ, ನಾನು ಮಠಕ್ಕೆ ಹೋದೆ. ಸ್ವಾಮಿಗಳನ್ನು ಕೇಳಿದೆ, 'ನಾಳೆ ದೊಡ್ಡ ಪ್ರಮಾಣದಲ್ಲಿ, ದರಿದ್ರ ನಾರಾಯಣಸೇವೆ (ಬಡವರಿಗೆ ಅನ್ನದಾನ)ಯಿದೆ ಎಂದು ಪ್ರಕಟಿಸಿದ್ದೀರಿ. ನಿಮ್ಮ ಹತ್ತಿರ ಈಗ ಒಂದು ಚೀಲದಷ್ಟೂ ಅಕ್ಕಿ ಇಲ್ಲ. ಹೇಗೆ ತಾನೇ ನಾಳೆಗೆ ಸಂಭಾಳಿಸುತ್ತೀರಿ?' ಎಂದು. ಅವರು ನನಗೆ ಛೀಮಾರಿ ಹಾಕಿದರು : 'ಮೂರ್ಖ! ತಾಯಿ ಅನ್ನಪೂರ್ಣೆಯಲ್ಲಿ ನಿನಗೆ ವಿಶ್ವಾಸವಿಲ್ಲವೇನು? ಅವಳ ಮಕ್ಕಳನ್ನು ಅವಳೇ ನೋಡಿಕೊಳ್ಳುತ್ತಾಳೆ. ನಾವು ಆಕೆಯ ಪಾದಪದ್ಮಗಳಿಗೆ ಶರಣಾಗಿ ನಿಶ್ಚಿಂತೆಯಿಂದಿರಬೇಕು. ಆ ಮಹಾ ತಾಯಿ ದೊಡ್ಡ ಪವಾಡವನ್ನೇ ಮಾಡಬಲ್ಲಳು.' ಅವರ ಛೀಮಾರಿ ಯಲ್ಲೂ ನನ್ನ ಮೇಲೆ ಅವರಿಗಿದ್ದ ಅನುಕಂಪೆ ಕಾಣುತ್ತಿತ್ತು. ನಾವು ಹೀಗೆ ಚರ್ಚೆ ನಡೆಸುತ್ತಿದ್ದಾಗಲೇ, ಎರಡು ಎತ್ತಿನ ಗಾಡಿಗಳು, ಮುಖ್ಯದ್ವಾರದ ಮುಂದೆ ಬಂದು ನಿಂತವು. ಅವುಗಳ ತುಂಬಾ ಅಕ್ಕಿಯ ಚೀಲಗಳು, ತುಪ್ಪದ ಡಬ್ಬಗಳು, ತರಕಾರಿ ತುಂಬಿದ ಬುಟ್ಟಿಗಳು ಮತ್ತು ಇತರೆ ಆಹಾರ ಪದಾರ್ಥಗಳು! ನನಗಂತೂ ಬಹಳ ಅಚ್ಚರಿ ಯಾಯಿತು.

ಅವರು ತಮ್ಮ ಭಕ್ತರಲ್ಲಿ ಆಧ್ಯಾತ್ಮಿಕ ಪ್ರವೃತ್ತಿಯ ಬೆಳವಣಿಗೆಯ ಬಗ್ಗೆ ತುಂಬ ಕಾಳಜಿಯನ್ನು ವಹಿಸುತ್ತಿದ್ದರು. ಪ್ರತಿರಾತ್ರಿ, ಮಲಗುವ ಮುನ್ನ, ಕೆಲವು ನಿಮಿಷಗಳಾದರೂ, ಕೆಳಕಂಡಂತೆ, ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಅವರು ಹೇಳುತ್ತಿದ್ದರು:

'ನನ್ನ ಕೋಪ ಮತ್ತು ಕಾಮನೆಯನ್ನು ಕಿತ್ತುಹಾಕಲು ಅಥವಾ ಸ್ವಲ್ಪವಾದರೂ ಅದರ ವೇಗವನ್ನು ಕಡಿಮೆಮಾಡಿಕೊಳ್ಳಲು, ನಾನಿಂದು ಯತ್ನಿಸಿದ್ದೇನೆಯೇ? ನಾನಿಂದು ಯಾವುದಾದರೂ ಒಳ್ಳೆಯ ಅಭ್ಯಾಸ ಅಥವಾ ಸದ್ಗುಣವನ್ನು ಮೈಗೂಡಿಸಿಕೊಳ್ಳಲು ಪ್ರಯತ್ನಿಸಿದ್ದೇನೆಯೇ?'

'ಒಬ್ಬ ಮೂರ್ಖ ಹೇಳುತ್ತಿದ್ದ "ಚಾರಿತ್ರ್ಯದಲ್ಲಿ ಶೇಕಡಾ ಎಪ್ಪತ್ತೈದು ಭಾಗ ಆಧ್ಯಾತ್ಮಿಕತೆ ಇದೆ" ಎಂದು. ನಾನು ಹೇಳುತ್ತೇನೆ, ಚಾರಿತ್ರ್ಯ ವೆಂಬುದು ಒಂದೂವರೆ ಪಟ್ಟು ಆಧ್ಯಾತ್ಮಿಕತೆಯೇ' ಎಂದು ರಾಮಕೃಷ್ಣಾನಂದರು ಹೇಳುತ್ತಿದ್ದರು.

ತಮ್ಮ ಭಕ್ತರು ನೀಡುತ್ತಿದ್ದ ಹಣವನ್ನು ಅವರೆಂದೂ ಇಟ್ಟುಕೊಂಡವರಲ್ಲ. ಅಂದಿನ ಆವಶ್ಯಕ ದಿನಸಿ ಪದಾರ್ಥಗಳಿಗಾಗುವಷ್ಟು ಇಟ್ಟುಕೊಂಡು ಉಳಿದವನ್ನು ಹಿಂತಿರುಗಿಸಿ ಬಿಡುತ್ತಿದ್ದರು. ಅನೇಕ ಸಂದರ್ಭಗಳಲ್ಲಿ, ಇದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಹಣದ ಸ್ಪರ್ಶವೆಂದರಾಗುತ್ತಿರಲಿಲ್ಲ ಅವರಿಗೆ. ಪ್ರವಚನಗಳಿಗೆ ಅವರು ಹೋದಾಗ ಕರೆದಿದ್ದವರು ಗಾಡಿಯ ಬಾಡಿಗೆಯನ್ನು, ಗಾಡಿ ಹೊಡೆಯುವವನಿಗೇ ನೇರವಾಗಿ ಕೊಡಬೇಕಾಗಿತ್ತು. 'ಕಾಮ-ಕಾಂಚನ ತ್ಯಾಗ ಬಹು ಮುಖ್ಯ ವಾದದ್ದು' ಎನ್ನುವ ತಮ್ಮ ಗುರುದೇವರ ಉಪದೇಶವಾಣಿಗೆ ಪ್ರಾಮುಖ್ಯತೆಯನ್ನು ಕೊಡುತ್ತಿದ್ದರು ಸ್ವಾಮಿ ರಾಮಕೃಷ್ಣಾನಂದರು. ಅವರೊಬ್ಬ ತ್ಯಾಗ ವೈರಾಗ್ಯಗಳ ಪ್ರತಿ ರೂಪವೇ ಆಗಿದ್ದರೆನ್ನಬೇಕು. ಅವರ ಸತ್ಸಂಗದಲ್ಲಿ, ಒಬ್ಬ ಗೃಹಸ್ಥ ಆದರ್ಶ ಗೃಹಸ್ಥನಾಗುತ್ತಿದ್ದನು, ಒಬ್ಬ ಬ್ರಹ್ಮಚಾರಿ ಆದರ್ಶ ಬ್ರಹ್ಮಚಾರಿ ಆಗುತ್ತಿದ್ದನು, ಒಬ್ಬ ಸಂನ್ಯಾಸಿ ಆದರ್ಶ ಸಂನ್ಯಾಸಿಯಾಗುತ್ತಿದ್ದನು.

ಸ್ವಾಮಿ ರಾಮಕೃಷ್ಣಾನಂದರು ಬಿಳಿಗಿರಿ ಅಯ್ಯಂಗಾರರಿಗೆ ಸೇರಿದ ಮನೆಯಲ್ಲಿ ಹಲವಾರು ವರ್ಷಗಳ ಕಾಲ ವಾಸ ಮಾಡಿದರು. ಬಿಳಿಗಿರಿ ಅಯ್ಯಂಗಾರರ ದೇಹಾಂತ್ಯವಾದ ಮೇಲೆ, ಅದರ ವಾರಸುದಾರರು, ಸ್ವಾಮಿಗಳು ಅಲ್ಲಿ ಇರುವುದಕ್ಕೆ ಅವಕಾಶ ಮಾಡಿಕೊಡಲು ಹಿಂಜರಿದರು. ಸ್ವಾಮಿಗಳಿಗೆ ಇದು ಗೊತ್ತಾಗಿ, ಒಡನೆಯೇ ಆ ಮನೆಯನ್ನು ಬಿಟ್ಟುಹೋಗಲು ನಿರ್ಧರಿಸಿದರು. ಆಗ ಅವರು ನುಡಿದರು, 'ನಾನೊಬ್ಬ ಸಂನ್ಯಾಸಿ. ಸಮುದ್ರದ ಮರಳು ದಂಡೆಯ ಮೇಲೆ ಕುಳಿತು, ಭಗವಂತನ ಸೌಂದರ್ಯದ ಮೇಲೆ ಧ್ಯಾನಿಸುವುದೇ ಶ್ರೇಯಸ್ಕರ ಎಂದು ಭಾವಿಸುತ್ತೇನೆ.' ಇದು ನಿಜವಾದ ಸಂನ್ಯಾಸಿಯ ಲಕ್ಷಣವಲ್ಲವೇ?

✤

## ಆಶ್ರಮದ ವಿಶೇಷ ಕಾರ್ಯಕ್ರಮಗಳು

### ಜುಲೈ

| | | |
|---|---|---|
| 16 | ಭಾನುವಾರ | ಗುರು ಪೂರ್ಣಿಮಾ |
| 29 | ಶನಿವಾರ | ಸ್ವಾಮಿ ರಾಮಕೃಷ್ಣಾನಂದ ಜಯಂತಿ |

*ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ*

**ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು ಈ-ಮೇಯಿಲ್ ಸೌಕರ್ಯವನ್ನು ಪಡೆದಿದೆ. ಇದರ ವಿಳಾಸ**
**vivekaprabha@eth.net**